ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ 470 ವಲಯ ಅರಣ್ಯ ಅಧಿಕಾರಿಗಳ ಕಛೇರಿಗಳಿವೆ.

ಆ) ಇಲಾಖೆಯಲ್ಲಿ 316 ಪ್ರಾದೇಶಿಕ ಹಾಗೂ ವನ್ಯಜೀವಿ ವಲಯಗಳಿದ್ದು, ಅವುಗಳ ಪೈಕಿ 75 ಪ್ರಾದೇಶಿಕ ಹಾಗೂ ವನ್ಯಜೀವಿ ವಲಯಗಳಿಗೆ ವಾಹನ ಸೌಲಭ್ಯವನ್ನು ಒದಗಿಸಲಾಗಿದೆ.

ಇ) ಅವಶ್ಯವಿದ್ದರೆ ವಾಹನಗಳನ್ನು ಹಂತ ಹಂತವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸುರತ್ಕಲ್ ಮೂಡುಶೆಡ್ ಕ್ಷಯರೋಗ ಆಸ್ಪತ್ರೆ ಬಗ್ಗೆ.

1795 - ಶ್ರೀ ಕಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸುರತ್ಕಲ್ ಮೂಡುಶೆಡ್ಡ್ ಕ್ಷಯರೋಗ ಆಸ್ಪತ್ರೆಗೆ ಸೇರಿದ ಜಮೀನಿನ ವಿಸ್ತಾರವೆಷ್ಟು?*
2. *ಪಿಲಿಕುಳ ನಿಸರ್ಗಧಾಮಕ್ಕೆ ಆಸ್ಪತ್ರೆಯ ಸ್ಥಳವನ್ನು ಬಿಟ್ಟುಕೊಡಲಾಗಿದೆಯೇ?ಕೊಟ್ಟಿದ್ದರೆ ಎಷ್ಟು ಜಾಗವನ್ನು ಬಿಟ್ಟು ಕೊಡಲಾಗಿದೆ?*
3. *ಕ್ಷಯರೋಗ ಆಸ್ಪತ್ರೆಯ ಉಳಿಕೆ ಸ್ಥಳದ ರಕ್ಷಣೆಗಾಗಿ ಏನು ಕ್ರಮ ಕೈಗೊಂಡಿದೆ?*
4. *ಸಾರ್ವಜನಿಕರು ಸ್ವೇಚ್ಛೆಯಿಂದ ಆ ಸ್ಥಳವನ್ನು ದುರುಪಯೋಗಪಡಿಸಿ ಮುಂದೆ ಸ್ವಾಧೀನಪಡಿಸುವ ಸಂಭವ ಇದೆಯೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*
5. *ಪ್ರಸಕ್ತ ಸಾಲಿನಲ್ಲಿ ಆವರಣ ನಿರ್ಮಾಣ ಮಾಡಲಾಗುವುದೆ?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1. 265.8 ಎಕರೆ
2. ಇಲ್ಲ.
3. ಮುಳ್ಳುತಂತಿ ಬೇಲಿ ಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
4. ಇಲ್ಲ.
5. ಹಂತ ಹಂತವಾಗಿ ಕಾಮಗಾರಿ (ಆವರಣ ಬೇಲಿ) ಕೈಗೊಳ್ಳಲು ಕ್ರಮ ತೆಗೆದು ಕೊಳ್ಳಲಾಗುವುದು.

ದ. ಕನ್ನಡ ಜಿಲ್ಲೆಯ ಶಾಲಾ ಕೊಠಡಿಯ ಕಳಪೆ ಕಾಮಗಾರಿ.

1796 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆ ಕಳಪೆ ಕಾಮಗಾರಿಯೆಂದು ಗುರುತಿಸಿರುವ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?*

ಅ) ಈ ಕೊಠಡಿಗಳ ದುರಸ್ತಿಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಕಳಪೆ ಕಾಮಗಾರಿಗೆ ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 25

ಆ) ಈಗಾಗಲೇ 12 ಕೊಠಡಿಗಳನ್ನು ದುರಸ್ತಿಗೊಳಿಸಲಾಗಿದೆ. ಉಳಿದ 13 ಕೊಠಡಿಗಳ ದುರಸ್ತಿ ಕಾಮಗಾರಿ ನಡೆಯುತ್ತಿದೆ.

ಇ) ಈ ಕಳಪೆ ಕಾಮಗಾರಿಗೆ ಕಾರಣರಾದವರ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳಿಗೆ ಪುಸ್ತಕಗಳ ಹೊರೆಯನ್ನು ಕಡಿತಗೊಳಿಸುವುದು.

1797 - ಶ್ರೀ ಕುಂಬೈ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳಿಗೆ ವಿಶೇಷತಃ ಇಂಗ್ಲೀಷ್ ಮಾಧ್ಯಮದ ಮಕ್ಕಳಿಗೆ ಪುಸ್ತಕಗಳ ಭಾರವನ್ನು ಕಡಿಮೆ ಮಾಡುವ ಕುರಿತು ಸರಕಾರದವರು ನಿಗಧಿತ ನಿಯಮಗಳನ್ನು ಜಾರಿಗೆ ತಂದಿರುವರೇ, ಇದ್ದಲ್ಲಿ ವಿವರಗಳೇನು?

ಆ) ನಿರ್ಧಿಷ್ಟಪಡಿಸಿದ ನಿಯಮಗಳನ್ನು ಶಾಲೆಗಳವರು ಪಾಲಿಸುತ್ತಿದ್ದಾರೆಯೇ? ಅಂಥ ನಿಯಮಗಳನ್ನು ಪಾಲಿಸದೇ ಇರುವ ಶಾಲೆಗಳ ವಿರುದ್ಧ ಸರ್ಕಾರದವರೇ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸುತ್ತಿದ್ದಾರೇಯೇ? ಇಲ್ಲವಾದಲ್ಲಿ ಕಾರಣಗಳೇನು?

ಇ) ಚಿಕ್ಕಮಕ್ಕಳ ಬೆನ್ನಮೇಲೆ ಹೊರಲಾರದಷ್ಟು ಭಾರವನ್ನು ಹೊತ್ತು ಸಾಗುತ್ತಿರುವುದನ್ನು ತಪ್ಪಿಸಲು ಸರ್ಕಾರದವರು ಸಕಾಲಿಕ ಕ್ರಮವನ್ನು ಕೈಗೊಳ್ಳುವರೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಯಶಪಾಲ್ ಸಮಿತಿ ವರದಿಯನ್ನಾಧರಿಸಿ ವಿದ್ಯಾರ್ಥಿಗಳ ಪುಸ್ತಕ ಹೊರೆ ಕಡಿಮೆ ಮಾಡುವ ಉದ್ದೇಶದಿಂದ ಪಠ್ಯಪುಸ್ತಕಗಳ ಗಾತ್ರ ಹಾಗೂ ಪುಟ ಸಂಖ್ಯೆ ಕಡಿಮೆಗೊಳಿಸಲಾಗಿದೆ. ಭಾಷಾವಿಷಯಗಳಿಗೆ ಸಂಬಂಧಿಸಿದಂತೆ ಉಪ ಪಠ್ಯಪುಸ್ತಕಗಳನ್ನು ತೆಗೆದುಹಾಕಲಾಗಿದೆ. ಪಠ್ಯ ಪುಸ್ತಕಗಳನ್ನಾಧರಿಸಿ ವೇಳಾ ಪಟ್ಟಿಯನ್ನು ರೂಪಿಸಲಾಗಿದೆ. ಇದು ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೂ ಅನ್ವಯವಾಗುತ್ತದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಇಲಾಖೆ ವಿಧಿಸಿರುವ ಪುಸ್ತಕಗಳಿಗಿಂತ ಹೆಚ್ಚಾಗಿ ಪುಸ್ತಕಗಳಿರದಿರುವಂತೆ ನಿರ್ಬಂಧಿಸಿ 28.5.94ರಲ್ಲಿ ಸುತ್ತೋಲೆ ಹೊರಡಿಸಲಾಗಿದೆ.